# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ 1999ಎಸ್‌ಜಿಸಿ025521**
**ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009**

---

ಸಂಖ್ಯೆ: ಕವಿಪ್ರನಿನಿ/ಬಿ31/ಅ.ಇಂ(ಐ.ಟಿ)/ಕಾ.ನಿ.ಇಂ(ಎನ್.ಡಬ್ಲ್ಯು&ಡಿ.ಸಿ)/1435/2021-22/ ದಿನಾಂಕ: 25/10/2021

## ಸುತ್ತೋಲೆ

**ವಿಷಯ:** ಕವಿಪ್ರನಿನಿಯಲ್ಲಿ ಸೈಬರ್ ಭದ್ರತಾ ಆಕ್ರಮಣಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು.

**ಉಲ್ಲೇಖ: ಸಂಖ್ಯೆ:ಬಿ31/ಅಇಂ(ಐ.ಟಿ&ಎಂ.ಐ.ಎಸ್)/ಕಾ.ನಿ.ಇಂ(ಐ.ಟಿ)/5872/ಸ.ಕಾ.ಇಂ-4/ ದಿನಾಂಕ:03.12.2019**

*****

ನ್ಯಾಷನಲ್ ಕ್ರಿಟಿಕಲ್ ಇನ್ಫರ್ಮೇಶನ್ ಇನ್‌ಫ್ರಾಸ್ಟ್ರಕ್ಚರ್ ಪ್ರೊಟೆಕ್ಷನ್ ಸೆಂಟರ್ (ಎನ್‌ಸಿಐಐಪಿಸಿ) ಹಾಗೂ CERT-In ನ ಪ್ರಕಾರ, ಹಲವಾರು ಸಂಸ್ಥೆಗಳು ಕ್ರಿಟಿಕಲ್ ಸೈಬರ್ ಭದ್ರತಾ ದೋಷಗಳಿಂದ ವಿವಿಧ ರೀತಿಯ ಸೈಬರ್ ದಾಳಿಗೆ ತುತ್ತಾಗುತ್ತಿರುವುದರಿಂದ ಸೈಬರ್ ದಾಳಿಯನ್ನು ತಡೆಗಟ್ಟಲು ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಿರುತ್ತಾರೆ.

ಮೇಲ್ಕಂಡ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕವಿಪ್ರನಿನಿಯಲ್ಲಿ ಸೈಬರ್ ದಾಳಿಯನ್ನು ತಡೆಗಟ್ಟಲು ಈಗಾಗಲೇ ಈ ಕೆಳಗಿನ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿತ್ತು.

- ಅಕ್ರೋಬ್ಯಾಟ್ ರೀಡರ್, ಆ್ಯಂಟಿ-ವೈರಸ್, ನುಡಿ, ಎಂಎಸ್ ಆಫೀಸ್ ಮುಂತಾದ ಲೈಸೆನ್ಸ್‌ಡ್ ಸಾಫ್ಟ್‌ವೇರ್‌ಗಳನ್ನು ಮಾತ್ರ ಕಛೇರಿ ಕಂಪ್ಯೂಟರ್‌ಗಳಲ್ಲಿ ಸ್ಥಾಪಿಸುವುದು (Install) ಮತ್ತು ಯಾವುದೇ ಅನಧಿಕೃತ ಸಾಫ್ಟ್‌ವೇರ್‌ಗಳನ್ನು ತೆಗೆದುಹಾಕುವುದು/ ಅಸ್ಥಾಪಿಸುವುದು (Uninstall), ನೂತನವಾಗಿ ಯಾವುದೇ ಸಾಫ್ಟ್‌ವೇರ್‌ಗಳನ್ನು ಸ್ಥಾಪಿಸಬೇಕಾದ ಸಂದರ್ಭದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಐಟಿ ವಿಭಾಗ, ಕವಿಪ್ರನಿನಿ, ಕಾವೇರಿ ಭವನ, ಇವರ ಗಮನಕ್ಕೆ ತರುವುದು.
- ಪರವಾನಗಿ ಪಡೆದ (Licensed version) ಸಾಫ್ಟ್‌ವೇರ್‌ಗಳನ್ನು ಮಾತ್ರ ಬಳಸುವುದು.
- ಆ್ಯಂಟಿ-ವೈರಸ್ ಸಾಫ್ಟ್‌ವೇರ್‌ನ್ನು ಎಲ್ಲಾ ಕಂಪ್ಯೂಟರ್‌ಗಳಲ್ಲಿ ಕಡ್ಡಾಯವಾಗಿ ಸ್ಥಾಪಿಸುವುದು ಮತ್ತು ಅವುಗಳನ್ನು ನವೀಕರಿಸುವುದು.
- ತಿಳಿದಿರುವ ಮೂಲಗಳಿಂದ ಬರುವ ಇಮೇಲ್ ಲಗತ್ತುಗಳನ್ನು ಮಾತ್ರ ಡೌನ್‌ಲೋಡ್ ಮಾಡುವುದು ಹಾಗೂ ಯಾವುದೇ ಅನುಮಾನಾಸ್ಪದ ಇಮೇಲ್‌ಗಳ ಲಿಂಕ್‌ಗಳನ್ನು ಡೌನ್‌ಲೋಡ್ ಮಾಡದೇ ಐಟಿ ವಿಭಾಗಕ್ಕೆ ವರದಿ ಮಾಡುವುದು.
- ಸೈಬರ್ ಭದ್ರತಾ ಮಟ್ಟವನ್ನು ಹೆಚ್ಚಿಸಲು ಬಲವಾದ ಪಾಸ್‌ವರ್ಡ್‌ಗಳನ್ನು (ಅಕ್ಷರಗಳು, ಸಂಖ್ಯೆಗಳು ಮತ್ತು ವಿಶೇಷ ಚಿಹ್ನೆಗಳ ಸಂಯೋಜನೆಯೊಂದಿಗೆ) ಬಳಸುವುದು.
- ಕಛೇರಿ ಕೆಲಸಕ್ಕೆ ಸಂಬಂಧಿಸಿದ ಫೈಲ್‌ಗಳು, ಡಾಕ್ಯುಮೆಂಟ್‌ಗಳನ್ನು ಹೊರತುಪಡಿಸಿ ಇತರೆ ಅನಧಿಕೃತ ಡೌನ್‌ಲೋಡ್‌ಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಿರುವುದರಿಂದ ಚಲನಚಿತ್ರಗಳು, ಹಾಡುಗಳು, ಅನಧಿಕೃತ ಸಾಫ್ಟ್‌ವೇರ್, ಫ್ರೀವೇರ್ ಸಾಫ್ಟ್‌ವೇರ್, ಇತ್ಯಾದಿಗಳನ್ನು ಡೌನ್‌ಲೋಡ್ ಮಾಡುವಂತಿಲ್ಲ.

ಮುಂದುವರೆದಂತೆ, ಮೇಲೆ ತಿಳಿಸಿರುವ ಮಾರ್ಗಸೂಚಿಗಳ ಜೊತೆಗೆ ಈ ಕೆಳಕಂಡ ಹೆಚ್ಚುವರಿ ಮಾರ್ಗಸೂಚಿಗಳನ್ನು ಅನುಸರಿಸಲು ನಿರ್ದೇಶಿಸಲಾಗಿದೆ.

- ಬಾಹ್ಯ ಸಾಧನಗಳಾದ(external devices) ಪೆನ್ ಡ್ರೈವ್(Pen drive), ಬಾಹ್ಯ ಹಾರ್ಡ್ ಡಿಸ್ಕ್ (External hard disk) ಇತ್ಯಾದಿಗಳನ್ನು ಡೆಸ್ಕ್‌ಟಾಪ್ ಕಂಪ್ಯೂಟರ್, ಲ್ಯಾಪ್‌ಟಾಪ್ ಇತ್ಯಾದಿಗಳಲ್ಲಿ ಉಪಯೋಗಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುವುದು.
- Windows OS install ಆಗಿರುವ ಡೆಸ್ಕ್‌ಟಾಪ್ ಕಂಪ್ಯೂಟರ್/ಲ್ಯಾಪ್‌ಟಾಪ್‌ಗಳಲ್ಲಿ FTP ಸರ್ವರ್ ಆಯ್ಕೆಯನ್ನು ಕಡ್ಡಾಯವಾಗಿ ನಿಷ್ಕ್ರಿಯಗೊಳಿಸುವುದು.
- ಕಡ್ಡಾಯವಾಗಿ Firewall ಅನ್ನು ಅಳವಡಿಸಿ, Firewall ಮುಖಾಂತರವೇ ಇಂಟರ್ನೆಟ್ ಪ್ರವೇಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳುವುದು.
- ಕಡ್ಡಾಯವಾಗಿ ಎಲ್ಲಾ ICT Infrastructure ಗಳ ನಿಯಮಿತ ಪರಿಶೋಧನೆ ಹಾಗೂ VAPT ಪರೀಕ್ಷೆಗಳನ್ನು CERT-In empanelled auditors ರವರಿಂದ ಮಾಡಿಸುವುದು.
- ವಲಯ ಕಛೇರಿಗಳಿಂದ ಒಬ್ಬ ಅಧಿಕಾರಿಯನ್ನು ಮಾಹಿತಿ ಭದ್ರತಾ ಅಧಿಕಾರಿಯನ್ನಾಗಿ ನೇಮಿಸುವುದು ಹಾಗೂ ಸದರಿ ಅಧಿಕಾರಿಯು ಐ.ಟಿ ವಿಭಾಗದ ಮಾಹಿತಿ ಭದ್ರತಾ ಅಧಿಕಾರಿಯೊಂದಿಗೆ ಸಮನ್ವಯ ನಡೆಸಿ ಸೈಬರ್ ಭದ್ರತೆಗೆ ಬೇಕಾಗಿರುವ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.

ತಾಂತ್ರಿಕ ಸಲಹೆಗಾಗಿ ತಾವು ಐ.ಟಿ ವಿಭಾಗವನ್ನು ಸಂಪರ್ಕಿಸಬಹುದು.

ಸೈಬರ್ ದಾಳಿಯನ್ನು ತಡೆಗಟ್ಟಲು ಮೇಲೆ ತಿಳಿಸಿರುವ ಸೈಬರ್ ಭದ್ರತೆಯ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

B.R. [signature] 25/10/21

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ, ಕಾವೇರಿ ಭವನ,**
**ಬೆಂಗಳೂರು–560009**

ಪ್ರತಿಗಳು:

1) ಎಲ್ಲಾ ಮುಖ್ಯ ಇಂಜಿನಿಯರ್‌ಗಳು(ವಿ), ಪ್ರಸರಣ ವಲಯ, ಕವಿಪ್ರನಿನಿ.
2) ಮುಖ್ಯ ಇಂಜಿನಿಯರ್‌ಗಳು(ವಿ), ಪಿ&ಸಿ, ಟಿ&ಪಿ, ಆರ್.ಟಿ ಮತ್ತು ಆರ್&ಡಿ, ತಾ.ಪ&ಗು.ನಿ, ನಿ.ವ್ಯ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
3) ಮುಖ್ಯ ಇಂಜಿನಿಯರ್(ವಿ), ಎಸ್.ಎಲ್.ಡಿ.ಸಿ, ಕವಿಪ್ರನಿನಿ, ಆನಂದ್ ರಾವ್ ವೃತ್ತ, ಬೆಂಗಳೂರು.
4) ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
5) ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
6) ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
7) ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆ ಮತ್ತು ಮಾ.ಸಂ) ರವರ ದಯಾಪರ ಗಮನಕ್ಕೆ ತರುವುದು.
8) ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ https://kptcl.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
9) ಮುಖ್ಯ ಕಡತ.